12484.24 ಲಕ್ಷ ರೂ.ಗಳಿಗೆ ಮತ್ತು ಬಂಡವಾಳ ಲೆಕ್ಕದಲ್ಲಿ **12600.00** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

26. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಕಾನೂನು'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **2056.89** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

27. 2010ನೇ ಮಾರ್ಚ್ 31 ರ ಅಂತ್ಯದೊಳಗಾಗಿ **'ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ'** ಇದಕ್ಕೆ ಸಂಬಂಧಿಸಿದ ವೆಚ್ಚಗಳ ಬಗ್ಗೆ ಸಂದಾಯ ಮಾಡಬೇಕಾಗಿ ಬರುವುದರಿಂದ ರಾಜಸ್ವ ಲೆಕ್ಕದಲ್ಲಿ **1835.16** ಲಕ್ಷ ರೂ.ಗಳಿಗೆ ಮೀರದ ಇನ್ನೂ ಹೆಚ್ಚಿನ ಮೊಬಲಗನ್ನು ಸರ್ಕಾರಕ್ಕೆ ಮಂಜೂರು ಮಾಡಬೇಕೆಂಬುದಾಗಿ ಕೋರುತ್ತೇನೆ.

ಅಧ್ಯಕ್ಷರು : (ಮಂಡಿಸಲಾಯಿತು.)

4. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

(1) ವಿಷಯ : ಅಡಿಕೆ ಬೆಂಬಲ ಬೆಲೆಯ ಬಗ್ಗೆ.

ಶ್ರೀ ಯು.ಟಿ.ಖಾದರ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರವು ಬಿಳಿಯ ಅಡಿಕೆಗೆ ಬೆಂಬಲ ಬೆಲೆಯನ್ನು ಘೋಷಿಸಿದೆ. ಒಂದು ಬೆಂಬಲ ಬೆಲೆಯನ್ನು ಘೋಷಿಸಿದ ನಂತರ ಅಲ್ಲಿಯ ಅಡಿಕೆ ಬೆಳೆಗಳಿಗೆ ಪ್ರಯೋಜನ ಆಗಬೇಕೇ ಹೊರತು ಇದರಿಂದ ತೊಂದರೆಯಾಗಿದೆ ಎಂದು ನಾನು ಹೇಳುವುದಕ್ಕೆ ಇಚ್ಚಿಸುತ್ತೇನೆ. ಏಕೆಂದರೆ, ಆ ಅಡಿಕೆ ಬೆಂಬಲ ಬೆಳೆಯು ಇರುವಾಗ ಮಾರ್ಕೆಟ್ ವ್ಯಾಲ್ಯೂ 75.00 ರೂಪಾಯಿಗಳು ಇತ್ತು. ಈಗ ಅದು 70.00 ರೂಪಾಯಿಗಳಿಗೆ ಬಂದು ನಿಂತಿದೆ. Campco ಮುಖಾಂತರ ಕೊಡುವಂತಹ ಬೆಂಬಲ ಬೆಲೆಯು 75.00 ರೂಪಾಯಿಗಳಿಗೆ ಬಂದು ಮುಟ್ಟಿದೆ. ಅದರ ಉಲ್ಲೇಖದಲ್ಲಿ ಎರಡು ಷರತ್ತನ್ನು ಹಾಕಿದ್ದಾರೆ. ಒಂದು ಷರತ್ತು ಯಾವುದೆಂದರೆ, 30% ಮಾತ್ರ ಅಂದರೆ ದಿವಸಕ್ಕೆ 100 ಜನ

ಬೆಳೆಗಾರರು ಬಂದರೆ 30 ಜನರಿಗೆ ಮಾತ್ರ ಬೆಂಬಲ ಬೆಲೆಯನ್ನು ಕೊಡಬೇಕು.

ಅಧ್ಯಕ್ಷರು : ಆಯಿತು. ನೀವು ಸ್ಪಷ್ಟವಾಗಿ ಕೇಳಿದ್ದೀರಿ.

ಶ್ರೀ ಯು.ಟಿ.ಖಾದರ್ : ಇನ್ನೊಂದು 6.00 ರೂಪಾಯಿಗಳಿಗೆ ಮಾತ್ರ. 69.00ದ ರೂಪಾಯಿ ಬೆಲೆ ಬಂದ ಅಡಿಕೆಗೆ 6.00 ರೂಪಾಯಿ ಎಂದು ಹೇಳಿದ್ದಾರೆ. ಇದರಲ್ಲಿ ಏನಾಗಿದೆ ಎಂದರೆ ಇದರಲ್ಲಿ 69.00 ರೂಪಾಯಿ ಗಳನ್ನು ಹಾಕುವುದು ಕಡಿಮೆ.

ಅಧ್ಯಕ್ಷರು : Explanation ಗೆ ಅವಕಾಶ ಎಲ್ಲಿದೆ?

ಶ್ರೀ ಯು.ಟಿ.ಖಾದರ್ : ಇದನ್ನು ಸರಿಪಡಿಸಬೇಕೆಂದು ಕೇಳುತ್ತೇನೆ. ಅಲ್ಲಿ ಗಲಾಟೆಯನ್ನು ಮಾಡುತ್ತಿದ್ದಾರೆ. ಈ ಒಂದು ಬೆಳೆಗೆ ಬೆಂಬಲ ಬೆಲೆಯನ್ನು ಘೋಷಿಸುವ ಮೂಲಕ Campco ಗೆ ಮತ್ತು ಯಾರು ಗುಜರಾತಿನ ಸೇಟುಗಳಿಗೆ ಅಡಿಕೆ ಮಾಫಿಯಾಗಳಿಗೆ ಮಾತ್ರ ಇದರಿಂದ ಪ್ರಯೋಜನವಾಗಿದೆ. ಅಡಿಕೆ ಬೆಳೆಗಾರರಿಗೆ ಯಾರಿಗೂ ಇದರಿಂದ ಪ್ರಯೋಜನವಾಗಿರುವುದಿಲ್ಲ. ಆದಕಾರಣ ಮಾರ್ಕೆಟ್ ದರ ಯಾವುದು ಇದೆ ಅದಕ್ಕೆ ಶೇಕಡ 10 ರಷ್ಟು ಸೇರಿಸಿಕೊಡುವಂತಹ ಕೆಲಸಗಳು ಆಗಬೇಕು ಆಗ ಮಾತ್ರ ರೈತರಿಗೆ ಇದರಿಂದ ಪ್ರಯೋಜನವಾಗುತ್ತದೆ. ಇದನ್ನು ಸರಿಪಡಿಸ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಯು.ಟಿ.ಖಾದರ್ ರವರು ದಕ್ಷಿಣ ಕನ್ನಡ ಜಿಲ್ಲೆಯ ಅಡಿಕೆ ಬೆಳೆಗಾರರಿಗೆ ಬೆಂಬಲ ಬೆಲೆಯ ಬಗ್ಗೆ ಹೇಳಿದ್ದಾರೆ. ಅದನ್ನು ನಾನು ಕೃಷಿ ಸಚಿವರ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : ಆಯಿತು. ತಮ್ಮದೇ ಇನ್ನೊಂದು ಇದೆ ಅದನ್ನು ಕೇಳಿ.

(2) ಪ್ರತಿ ಶಾಸಕರಿಗೆ ಪ್ರದೇಶಾಭಿವೃದ್ಧಿ ಎಂದು ವರ್ಷಕ್ಕೆ ಒಂದು ಕೋಟಿ ರೂ. ಬಜೆಟ್‌ನಲ್ಲಿ ಘೋಷಣೆ ಮಾಡಿರುವುದರ ಬಗ್ಗೆ :